**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಎಂ.ವಿ.ಸಿ. ಸಂಖ್ಯೆ35/2022**

ಆರ್.ಡಬ್ಲ್ಯೂ-1

| | | |
|---|---|---|
| ಹೆಸರು | : | ಶ್ರೀಮತಿ ಹೇಮಾವತಿ |
| ಗಂಡನ ಹೆಸರು | : | ಪ್ರಸನ್ನಕುಮಾರ್ |
| ವಯಸ್ಸು | : | 54 |
| ವೃತ್ತಿ | : | ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಡ್ಯ |
| ವಾಸ | : | ಮಂಡ್ಯ |

**ದಿನಾಂಕ 17.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಬಿ.ಎಂ.ಎಸ್. ವಕೀಲರಿಂದ**

ಕಳೆದ ಎರಡು ವರ್ಷಗಳಿಂದ ನಾನು ಮಂಡ್ಯದ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಟ್ರಾಕ್ಟರ್ ಸಂಖ್ಯೆ ಕೆಎ-11/ಟಿಎ-5180 ಮತ್ತು ಟ್ರೈಲರ್ ಸಂಖ್ಯೆ ಕೆಎ-11/ಟಿಎ-5612 ರ ವಿಮೆಗೆ ಸಂಬಂಧಿಸಿದ ಎರಡು ಆನ್‌ಲೈನ್ ದಾಖಲೆಗಳು ಮತ್ತು ಅವುಗಳ ಬಿ-ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಆರ್.1 ರಿಂದ 4 ಎಂದು ಗುರುತಿಸಲಾಯಿತು.

ಸದರಿ ನಿ.ಆರ್. 3 ಮತ್ತು 4 ರಲ್ಲಿ ನಮೂದಿರುವ ವಾಹನಗಳಿಗೆ ಯಾವ ಕಂಪನಿಯ ವಿಮೆ ಇದೆ ಎಂದು ಆ ದಾಖಲೆಗಳಲ್ಲಿ ನಮೂದು ಇರುತ್ತದೆ. ಅಪಘಾತದ ಅವಧಿಗೆ ಸದರಿ ಟ್ರೈಲರ್‌ಗೆ ವಿಮೆ ನೀಡಿರುವ ಕಂಪನಿಯು ಮ್ಯಾಗ್ಮ

ಕಂಪನಿಯಾಗಿರುತ್ತದೆ. ಆ ಬಗ್ಗೆ ನಿ.ಆರ್. 2 ರಲ್ಲಿ ನಮೂದು ಇದ್ದು, ಕವರ್ ನೋಟ್ ಸಂಖ್ಯೆಕೂಡ ನಮೂದಾಗಿದೆ.

**4ನೇ ಎದುರುದಾರರ ಪರ ವಕೀಲರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಅವರಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲು : ಶ್ರೀ ಬಿ.ಜಿ.ಕೆ. 4ನೇ ಎದುರುದಾರರ ಪರ ವಕೀಲರಿಂದ:**

ಒಂದು ಹೊಸ ವಾಹನವು ನೊಂದಣಿಗಾಗಿ ಪ್ರಾದೇಶಿಕ ಸಾರಿಗೆ ಕಚೇರಿಗೆ ಬಂದಾಗ ಆ ವಾಹನಕ್ಕೆ ಯಾವ ಕಂಪನಿಯಿಂದ ವಿಮೆಯಿದೆ ಎಂದು ಆ ವಾಹನದ ನೊಂದಣಿ ಪುಸ್ತಕದಲ್ಲಿ ಆನ್‌ಲೈನ್‌ನಲ್ಲಿ ನಮೂದು ಮಾಡಲಾಗುತ್ತದೆ. ಆ ರೀತಿ ನಮೂದಿಸಲು ಮಾಹಿತಿಯನ್ನು ಆ ವಾಹನದ ಮಾಲೀಕರು ನೀಡುತ್ತಾರೆ.

ನಿ.ಆರ್.3 ರ ಪ್ರಕಾರ ಟ್ರಾಕ್ಟರ್ ದಿನಾಂಕ 10.09.2020 ರಂದು ಮತ್ತು ನಿ.ಆರ್.4 ರ ಪ್ರಕಾರ್ ಟ್ರೈಲರ್ ದಿನಾಂಕ 01.03.2021 ರಂದು ನೊಂದಣಿಯಾಗಿವೆ. ಆ ರೀತಿ ಆ ವಾಹನಗಳನ್ನು ನೊಂದಣಿ ಮಾಡುವಾಗ ಅವುಗಳ ವಿಮೆಯ ವಿವರಗಳನ್ನು ಯಾರು ನೀಡಿದ್ದಾರೋ ಅವರ ಮಾಹಿತಿಯಂತೆ ಆ ವಾಹನಗಳ ವಿಮೆ ವಿವರಗಳನ್ನು ನಮೂದು ಮಾಡಲಾಗಿದೆ ಎಂದರೆ ಸರಿ.

ನಮ್ಮ ಸಾರಿಗೆ ಇಲಾಖೆಯ ದಾಖಲೆಗಳ ಪ್ರಕಾರ ಟ್ರಾಕ್ಟರ್ ಸಂಖ್ಯೆ ಕೆಎ-11/ಟಿಎ-5180 ಕ್ಕೆ ಟ್ರೈಲರ್ ಸಂಖ್ಯೆಕೆಎ-11/ಟಿಎ-5612 ಲಗತ್ತಾಗಿದೆ.

2021-2022 ರವರೆಗೂ ವಾಹನಗಳ ನೊಂದಣಿ ವೇಳೆಗೆ ಅವುಗಳ ವಿಮೆಯ ವಿವರಗಳನ್ನು ಆನ್‌ಲೈನ್‌ಗೆ ಮ್ಯಾನುಯಲ್ ಮೂಲಕ ನಮೂದು

ಮಾಡಬೇಕಾಗಿತ್ತು. ಹಾಗಾಗಿ, ಈ ಮೇಲೆ ಹೇಳಿದ ಎರಡೂ ವಾಹನಗಳಿಗೂ ಅದೇ ರೀತಿ ವಿಮೆ ವಿವರಗಳನ್ನು ನಮೂದು ಮಾಡಲಾಗಿದೆ ಎಂದರೆ ಸರಿ.

ನೊಂದಣಿಯಾಗುವ ಒಂದು ವಾಹನಕ್ಕೆ ವಿಮೆ ವಿವರಗಳನ್ನು ಆ ವಾಹನದ ದಾಖಲೆಗಳಲ್ಲಿ ನಮೂದಿಸಬೇಕೆಂಬ ನಿಯಮ ಸಾರಿಗೆ ಇಲಾಖೆಯು ಪ್ರಾರಂಭವಾದಾಗಿನಿಂದಲೂ ಇದೆ. ಅದು ಪ್ರಾರಂಭವಾದಾಗಿನಿಂದ 2022 ರವರೆವಿಗೂ ಆ ವಿವರಗಳನ್ನು ಈ ಮೇಲೆ ಹೇಳಿದ ರೀತಿ ಮ್ಯಾನುಯಲ್ ಮೂಲಕ ನಮೂದಿಸಲಾಗುತ್ತಿತ್ತು ಎಂದರೆ ಸರಿ.

ನಿ.ಆರ್.3 ಮತ್ತು 4 ರ ದಾಖಲೆಗಳಲ್ಲಿ ಈ ಮೇಲೆ ಹೇಳಿದ ವಾಹನಗಳಿಗೆ ಅಪಘಾತವಾದ ವೇಳೆಗೆ ಯಾವ ಕಂಪನಿಯ ವಿಮೆ ಇತ್ತು ಎಂದು ನಮೂದು ಇಲ್ಲ ಎಂದರೆ ಸರಿ. ಹಾಗಾಗಿ, ಆ ವೇಳೆಗೆ ಆ ವಾಹನಗಳ ಬಿ ರಿಜಿಸ್ಟರ್ ಪ್ರತಿಗಳನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿ.ಆರ್. 3 ಪ್ರಕಾರ ಟ್ರಾಕ್ಟರ್‌ನ ನೊಂದಣಿ ಪುಸ್ತಕದ ಅವಧಿಯು ದಿನಾಂಕ 10.09.2020 ರಿಂದ 09.09.2035 ರವರೆಗೆ ಮತ್ತು ನಿ.ಆರ್.4 ಪ್ರಕಾರ ಟ್ರೈಲರ್‌ನ ನೊಂದಣಿ ಪುಸ್ತಕದ ಅವಧಿಯು ದಿನಾಂಕ 01.03.2021 ರಿಂದ 29.02.2036 ರವರೆಗೆ ಇವೆ. ಸದರಿ ಟ್ರಾಕ್ಟರ್‌ನ ಮಾಲೀಕತ್ವವು ದಿನಾಂಕ 31.03.2023 ರಂದು ಬದಲಾಗಿದೆ, ಸದರಿ ಟ್ರೈಲರ್‌ನ ಮಾಲೀಕತ್ವವು ಇಲ್ಲಿಯವರೆಗೂ ಬದಲಾಗಿಲ್ಲ.

ಸದರಿ ಟ್ರೈಲರ್‌ನ ಮಾಲೀಕತ್ವವು ಬದಲಾಗಿರದ ಕಾರಣ ಅದರ ನೊಂದಣಿಯ ವೇಳೆಗೆ ಆದ ಬಿ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ, ನಂತರದ ವರ್ಷಗಳಲ್ಲಿ ಬಿ ರಿಜಿಸ್ಟರ್‌ನ ಪ್ರತಿಗಳನ್ನು ಪಡೆದುಕೊಂಡಾಗ ಹಳೇಯ ಬಿ ರಿಜಿಸ್ಟರ್ ಪ್ರತಿಗಳು ಆನ್‌ಲೈನ್‌ನಲ್ಲಿ ಇರುವುದಿಲ್ಲ ಮತ್ತು ನಮ್ಮ ಇಲಾಖೆಯಲ್ಲಿ ಹಳೇಯ ಬಿ ರಿಜಿಸ್ಟರ್ ಪ್ರತಿಗಳ ರಿಜಿಸ್ಟರ್‌ನ್ನು ಇಡುವುದಿಲ್ಲ.

ನಿ.ಆರ್. 4 ರಲ್ಲಿ ಕಂಡು ಬರುವಂತೆ ಸದರಿ ಟ್ರೈಲರ್ ಮೇಲೆ ಯಾವುದೇ ಋಣಭಾರ ಸೃಷ್ಠಿಯಾಗಿ ರದ್ದುಗೊಂಡಿಲ್ಲ.

ನಾನು ಹೇಳುವಂತೆ ಸದರಿ ಟ್ರೈಲರ್‌ಗೆ ಅಪಘಾತದ ವೇಳೆಗೆ ಮ್ಯಾಗ್ಮ ವಿಮಾ ಕಂಪನಿಯಿಂದ ಯಾವುದೇ ವಿಮೆಯನ್ನು ನೀಡಿರದೆ ನಾನು ಮತ್ತು 3ನೇ ಎದುರುದಾರರು ಶಾಮೀಲಾಗಿ ಆ ಕಂಪನಿಯಿಂದ ಆ ವಾಹನಕ್ಕೆ ಆ ವೇಳೆಗೆ ವಿಮೆ ಇತ್ತು ಎಂದು ಸುಳ್ಳು ದಾಖಲೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಅವರೊಂದಿಗೆ ಶಾಮೀಲಾಗಿರುವ ಕಾರಣ ಅಪಘಾತದ ವೇಳೆಗೆ ಸದರಿ ಟ್ರೈಲರ್‌ನ ಬಿ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ವಿಮೆಯ ವಿವರಗಳನ್ನು ಮ್ಯಾನುಯಲ್ ಮೂಲಕ ನಮೂದಿಸುವಾಗ ಆ ರೀತಿ ನಮೂದಿಸುವ ಎಲ್ಲಾ ವಿವರಗಳು ಸರಿಯಾಗಿವೆಯೆಂದು ಹೇಳಬಹುದಾ ಎಂದರೆ ವಾಹನಗಳ ಮಾಲೀಕರು ನೀಡುವ ವಿಮಾ ಪಾಲಿಸಿಯ ವಿವರಗಳನ್ನು ನೋಡಿ ನಾವು ಮ್ಯಾನುಯಲ್ ಮೂಲಕ ನಮೂದು ಮಾಡುತ್ತೇವೆ. ಅವರು

ನೀಡುವ ಪಾಲಿಸಿಯು ನೈಜ ಪಾಲಿಸಿಯೋ ಅಥವಾ ಅಲ್ಲವೋ ಎಂಬ ಬಗ್ಗೆ ಪರಿಶೀಲಿಸಲು ನಮ್ಮಲ್ಲಿ ಯಾವುದೇ ಪರೀಕ್ಷಾ ವಿಧಾನವಿರುವುದಿಲ್ಲ. ಆ ಪಾಲಿಸಿಯ ನೈಜತೆಯ ಬಗ್ಗೆ ಹೇಳಲು ವಿಮಾ ಕಂಪನಿಗಳಿಗೆ ಮಾತ್ರ ಸಾಧ್ಯ ಎಂದರೆ ಸರಿ.

ನಿ.ಆರ್. 1 ಮತ್ತು 2 ರ ದಾಖಲೆಗಳು ಆನ್‌ಲೈನ್‌ನಿಂದ ಪಡೆದಿರುವ ದಾಖಲೆಗಳಾಗಿರುವುದರಿಂದ ಅವುಗಳ ನಿಖರತೆಯ ಬಗ್ಗೆ ಹೇಳಬಹುದಾ ಎಂದರೆ ಅವುಗಳನ್ನು ಆನ್‌ಲೈನ್‌ನಿಂದ ಪಡೆದು ಹಾಜರುಪಡಿಸಿದ್ದು, ಅವುಗಳ ನಿಖರತೆ ಬಗ್ಗೆ ಹೇಳಲು ಬರುವುದಿಲ್ಲ. ಅವುಗಳನ್ನು ನಮ್ಮ ಕಚೇರಿಯಿಂದ ಹೊರಗೆ ಖಾಸಗಿ ಕಂಪ್ಯೂಟರ್‌ನಲ್ಲಿ ತೆಗೆದು 3ನೇ ಎದುರುದಾರರಿಗೆ ಸಹಾಯ ಮಾಡಲು ನಾನು ಇಲಾಖಾ ಮೊಹರನ್ನು ಹಾಕಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ದಾಖಲೆಗಳು ನಮ್ಮ ಕಚೇರಿಯಿಂದ ಅಧಿಕೃತವಾಗಿ ನೀಡಿರುವ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

ಅಪಘಾತದ ವೇಳೆಗೆ ಇದ್ದ ಟ್ರೈಲರ್‌ನ ಬಿ ರಿಜಿಸ್ಟರ್ ಪ್ರತಿಯನ್ನು ಹಾಜರು ಪಡಿಸದರೆ ಸತ್ಯ ತಿಳಿಯಬಹುದು ಎಂದು ಈಗಿನ ಬಿ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 54/2021**

ಚಾ.ಸಾ–03, ಫ್ರಾ.ಸಾ–03

| | | |
|---|---|---|
| ಹೆಸರು | : | ರವಿ |
| ತಂದೆಯ ಹೆಸರು | : | ಲೇಟ್ ಸಿದ್ದಯ್ಯ |
| ವಯಸ್ಸು | : | 50 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಆಲಗೂಡು ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ–1, 2, ಚಾ.ಸಾ–4 ರಿಂದ 6 ಮತ್ತು ಆರೋಪಿತನ ಪರಿಚಯವಿದೆ. ಮೃತ ಮಹದೇವ ರವರ ಪರಿಚಯವಿತ್ತು.

ನಾನು ಅಪಘಾತವನ್ನು ನೋಡಿಲ್ಲ. ಅಪಘಾತದಿಂದ ನನಗೆ ಯಾವುದೇ ಪೆಟ್ಟಾಗಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 13.07.2020 ರಂದು ಬೆಳಗ್ಗೆ 06.30 ಗಂಟೆ ಸಮಯದಲ್ಲಿ ತಿ. ನರಸೀಪುರ ತಾಲ್ಲೂಕಿನ ಬೊಮ್ಮೆನಹಳ್ಳಿಯ ಬನ್ನಾರಿ ಮಾರಮ್ಮ ದೇವಸ್ಥಾನದ ಹತ್ತಿರ,

ತಿ.ನರಸೀಪುರ– ಕಿರುಗಾವಲು ಮುಖ್ಯರಸ್ತೆಯ ತಿರುವಿನಲ್ಲಿ, ಆರೋಪಿತ ಲಾರಿ ಸಂಖ್ಯೆ ಕೆ.ಎಲ್–12/ಎ–6553 ನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದು, ಆ ಪರಿಣಾಮ ಅದು ಮಗುಚಿಕೊಂಡಿದ್ದು,ಅದರಲ್ಲಿ ಕ್ಲೀನರ್ ಆಗಿದ್ದ ಸದರಿ ಮಹದೇವರವರು ಅದರಿಂದ ಕೆಳಗೆ ಬಿದ್ದು, ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಅವರು ಮರಣಹೊಂದಿದ್ದು, ನನಗೆ, ಫ್ರಾಸಾ–2 ಮತ್ತು ಚಾ.ಸಾ–4 ರಿಂದ 6 ರವರೆಗೆ ಸಾಧಾ ಮತ್ತು ತೀವ್ರ ಸ್ವರೂಪದ ಗಾಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕ 14.07.2020ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಿ.ಪಿ–5 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 54/2021**

ಚಾ.ಸಾ–04, ಫ್ರಾ.ಸಾ–04

| | | |
|---|---|---|
| ಹೆಸರು | : | ನಂಜುಂಡಸ್ವಾಮಿ |
| ತಂದೆಯ ಹೆಸರು | : | ಲೇಟ್ ಕೊನಾರ ಸಣ್ಣಯ್ಯ |
| ವಯಸ್ಸು | : | 47 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಕೊಳತ್ತೂರು ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ–1 ರಿಂದ 3, ಚಾ.ಸಾ–5, 6 ಮತ್ತು ಆರೋಪಿತನ ಪರಿಚಯವಿದೆ. ಮೃತ ಮಹದೇವ ರವರ ಪರಿಚಯವಿತ್ತು.

ನಾನು ಅಪಘಾತವನ್ನು ನೋಡಿಲ್ಲ. ಅಪಘಾತದಿಂದ ನನಗೆ ಯಾವುದೇ ಪೆಟ್ಟಾಗಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 13.07.2020 ರಂದು ಬೆಳಗ್ಗೆ 06.30 ಗಂಟೆ ಸಮಯದಲ್ಲಿ ತಿ. ನರಸೀಪುರ ತಾಲ್ಲೂಕಿನ ಬೊಮ್ಮೆನಹಳ್ಳಿಯ ಬನ್ನಾರಿ ಮಾರಮ್ಮ ದೇವಸ್ಥಾನದ ಹತ್ತಿರ,

ತಿ.ನರಸೀಪುರ– ಕಿರುಗಾವಲು ಮುಖ್ಯರಸ್ತೆಯ ತಿರುವಿನಲ್ಲಿ, ಆರೋಪಿತ ಲಾರಿ ಸಂಖ್ಯೆ ಕೆ.ಎಲ್–12/ಎ–6553 ನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದು, ಆ ಪರಿಣಾಮ ಅದು ಮಗುಚಿಕೊಂಡಿದ್ದು,ಅದರಲ್ಲಿ ಕ್ಲೀನರ್ ಆಗಿದ್ದ ಸದರಿ ಮಹದೇವರವರು ಅದರಿಂದ ಕೆಳಗೆ ಬಿದ್ದು, ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಅವರು ಮರಣಹೊಂದಿದ್ದು, ನನಗೆ, ಫ್ರಾಸಾ–2, 3 ಮತ್ತು ಚಾ.ಸಾ–5, 6 ರವರಿಗೆ ಸಾಧಾ ಮತ್ತು ತೀವ್ರ ಸ್ವರೂಪದ ಗಾಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕ 14.07.2020ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಿ.ಪಿ–6 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 54/2021**

ಚಾ.ಸಾ–05, ಪ್ರಾ.ಸಾ–05

| | | |
|---|---|---|
| ಹೆಸರು | : | ರಾಜು |
| ತಂದೆಯ ಹೆಸರು | : | ಲೇಟ್ ಕುಳ್ಳಯ್ಯ |
| ವಯಸ್ಸು | : | 70 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಆಲಗೂಡು ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ–1 ರಿಂದ 4, ಚಾ.ಸಾ–6 ಮತ್ತು ಆರೋಪಿತನ ಪರಿಚಯವಿದೆ. ಮೃತ ಮಹದೇವ ರವರ ಪರಿಚಯವಿತ್ತು.

ನಾನು ಅಪಘಾತವನ್ನು ನೋಡಿಲ್ಲ. ಅಪಘಾತದಿಂದ ನನಗೆ ಯಾವುದೇ ಪೆಟ್ಟಾಗಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 13.07.2020 ರಂದು ಬೆಳಗ್ಗೆ 06.30 ಗಂಟೆ ಸಮಯದಲ್ಲಿ ತಿ. ನರಸೀಪುರ ತಾಲ್ಲೂಕಿನ ಬೊಮ್ಮೆನಹಳ್ಳಿಯ ಬನ್ನಾರಿ ಮಾರಮ್ಮ ದೇವಸ್ಥಾನದ ಹತ್ತಿರ,

ತಿ.ನರಸೀಪುರ- ಕಿರುಗಾವಲು ಮುಖ್ಯರಸ್ತೆಯ ತಿರುವಿನಲ್ಲಿ, ಆರೋಪಿತ ಲಾರಿ ಸಂಖ್ಯೆ ಕೆ.ಎಲ್-12/ಎ-6553 ನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದು, ಆ ಪರಿಣಾಮ ಅದು ಮಗುಚಿಕೊಂಡಿದ್ದು,ಅದರಲ್ಲಿ ಕ್ಲೀನರ್ ಆಗಿದ್ದ ಸದರಿ ಮಹದೇವರವರು ಅದರಿಂದ ಕೆಳಗೆ ಬಿದ್ದು, ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಅವರು ಮರಣಹೊಂದಿದ್ದು, ನನಗೆ, ಫ್ರಾಸಾ-2 ರಿಂದ 4 ಮತ್ತು ಚಾ.ಸಾ-6 ರವರಿಗೆ ಸಾಧಾ ಮತ್ತು ತೀವ್ರ ಸ್ವರೂಪದ ಗಾಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕ 14.07.2020ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಿ.ಪಿ-7 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 54/2021**

ಚಾ.ಸಾ–06, ಪ್ರಾ.ಸಾ–06

| | | |
|---|---|---|
| ಹೆಸರು | : | ಸಿದ್ದರಾಜು |
| ತಂದೆಯ ಹೆಸರು | : | ಮಾದಯ್ಯ |
| ವಯಸ್ಸು | : | 51 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಆಲಗೂಡು ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ–1 ರಿಂದ 5 ಮತ್ತು ಆರೋಪಿತನ ಪರಿಚಯವಿದೆ. ಮೃತ ಮಹದೇವ ರವರ ಪರಿಚಯವಿತ್ತು.

ನಾನು ಅಪಘಾತವನ್ನು ನೋಡಿಲ್ಲ. ಅಪಘಾತದಿಂದ ನನಗೆ ಯಾವುದೇ ಪೆಟ್ಟಾಗಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 13.07.2020 ರಂದು ಬೆಳಗ್ಗೆ 06.30 ಗಂಟೆ ಸಮಯದಲ್ಲಿ ತಿ. ನರಸೀಪುರ ತಾಲ್ಲೂಕಿನ ಬೊಮ್ಮೆನಹಳ್ಳಿಯ ಬನ್ನಾರಿ ಮಾರಮ್ಮ ದೇವಸ್ಥಾನದ ಹತ್ತಿರ,

ತಿ.ನರಸೀಪುರ- ಕಿರುಗಾವಲು ಮುಖ್ಯರಸ್ತೆಯ ತಿರುವಿನಲ್ಲಿ, ಆರೋಪಿತ ಲಾರಿ ಸಂಖ್ಯೆ ಕೆ.ಎಲ್-12/ಎ-6553 ನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದು, ಆ ಪರಿಣಾಮ ಅದು ಮಗುಚಿಕೊಂಡಿದ್ದು,ಅದರಲ್ಲಿ ಕ್ಲೀನರ್ ಆಗಿದ್ದ ಸದರಿ ಮಹದೇವರವರು ಅದರಿಂದ ಕೆಳಗೆ ಬಿದ್ದು, ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಅವರು ಮರಣಹೊಂದಿದ್ದು, ನನಗೆ ಮತ್ತು ಪ್ರಾಸಾ-2 ರಿಂದ 5 ರವರಿಗೆ ಸಾಧಾ ಮತ್ತು ತೀವ್ರ ಸ್ವರೂಪದ ಗಾಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕ 14.07.2020ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಿ.ಪಿ-8 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**